# ಕಸ–ಕಸವರ

‘ಕಸ’ ಹಾಗೂ ‘ಕಸವರ’ ವಿರುದ್ಧ ಧ್ರುವಗಳಂಥ ಪದಗಳು. ಕಸದ ವ್ಯಾಪಕತೆ ದೊಡ್ಡದು: ಕೊಳೆ, ಹೊಲಸು, ಹೆರಿಗೆಯ ಸತ್ತೆ, ಬಾವು... ಮನಸ್ಸಿಗೆ ವರ್ಜ್ಯವಾದುದೆಲ್ಲ, ಕೊಳಕೆಂದು ತೋರಿದುದೆಲ್ಲ ಕಸವೇ. ಬೆಳೆಯ ನಡುವೆ ಬೆಳೆಯುವ ಅನಗತ್ಯ ಹುಲ್ಲು–ಗಿಡಗಳೂ ಕಳೆಯೇ. ಕಳೆದುಕೊಳ್ಳಬೇಕಾದುದೆಲ್ಲ ‘ಕಸ’ವೆನ್ನಿಸಿಕೊಳ್ಳುವುದು. ಕಸವರದ ಮಾತು ಹಾಗಲ್ಲ. ಅದು ಗಳಿಸುವಂತಹದ್ದು. ಕಸದ ಜೊತೆಗೆ ‘ವರ’ ಸೇರಿರುವುದರಿಂದಲೋ ಏನೋ, ‘ಕಸವರ’ ಹೊನ್ನಾಗಿದೆ. ಧನ, ಸಂಪತ್ತು, ಚಿನ್ನವೆಂದೆಲ್ಲ ಕರೆಸಿಕೊಂಡು ಲೋಕ ಬಯಸಿ ಬರಮಾಡಿಕೊಳ್ಳುವಂತಹದ್ದಾಗಿದೆ.

ಕಸ–ಕಸವರ, ಬದುಕಿನ ಎರಡು ಅವಸ್ಥೆಗಳನ್ನು ಸೂಚಿಸುವ ಪದಗಳು. ತಾತ್ವಿಕವಾಗಿ ನೋಡಿದರೆ, ಮನುಷ್ಯದೇಹದ ಆತ್ಯಂತಿಕ ಸ್ಥಿತಿ ಕಸವೇ. ಆದರೆ, ಪ್ರಯತ್ನಪೂರ್ವಕವಾಗಿ ಬದುಕನ್ನು, ವ್ಯಕ್ತಿತ್ವವನ್ನು ಕಸವರ ಆಗಿಸಿಕೊಳ್ಳಲಿಕ್ಕೆ ಸಾಧ್ಯವಿದೆ. ಕಸವನ್ನು ದೂರ ಮಾಡಿಕೊಳ್ಳುವ ನಿರಂತರ ಪ್ರಯತ್ನವೇ ಬದುಕನ್ನು ಕಸವರವಾಗಿಸುವ ‘ಅಸಲು ಕಸುಬು.’

ಚಿನ್ನವನ್ನು ಲೋಹವೆಂದಷ್ಟೇ ಕಾಣುವುದು ನಮ್ಮ ಗ್ರಹಿಕೆಯ ಮಿತಿ. ಚಿನ್ನವೆನ್ನುವುದು ಒಂದು ಅವಸ್ಥೆ, ಆದರ್ಶ. ಯಾವುದೇ ಬದುಕು ಅಥವಾ ಕ್ರಿಯೆ ಕಂಡುಕೊಳ್ಳುವ ಔನ್ನತ್ಯವೇ ಹೊನ್ನು. ವ್ಯಕ್ತಿತ್ವದ ಹೊಳಪಿಗೆ ಕಾರಣವಾಗುವ ಗುಣಗಳೆಲ್ಲ ಬಂಗಾರವೇ. ಸಮಾಜವನ್ನು ಮಾನವೀಯಗೊಳಿಸಲು ಪೂರಕವಾಗಿ ಒದಗಿಬರುವ ಸಂಗತಿಗಳೆಲ್ಲ ಹೊನ್ನೇ. ಚಿನ್ನದ ಕುರಿತು ಲೋಕದ ಜನಪ್ರಿಯ ಪರಿಕಲ್ಪನೆಯನ್ನು ಬದಲಾಯಿಸುವ ನಿಟ್ಟಿನಲ್ಲಿ ‘ಕವಿರಾಜಮಾರ್ಗ’ದ ಮಾತು ದೀವಿಗೆಯಂತಿದೆ. ಕವಿರಾಜ ಮಾರ್ಗಕಾರ ಹೇಳುತ್ತಾನೆ:

ಕಸವರಮೆಂಬುದು ನೆಱೆ ಸೈ
ರಿಸಲಾರ್ಪೊಡೆ ಪರವಿಚಾರಮಂ ಧರ್ಮಮುಮಂ
ಕಸವೇಂ ಕಸವರಮೇನು
ಬ್ಬಸಮಂ ಬಸಮಲ್ಲದಿರ್ದು ಮಾಡುವರೆಲ್ಲಂ

ಕಾದಿರಿಸಿಕೊಳ್ಳಬೇಕಾದ ನಿಧಿಯ ರೂಪದಲ್ಲಿ ಸಮಾಜ ಚಿನ್ನವನ್ನು ನೋಡುತ್ತದೆ. ಕವಿರಾಜ ಮಾರ್ಗಕಾರ ನಮಗೆ ಕಾಣಿಸುವ ನಿಜವಾದ ಚಿನ್ನ ಬೇರೆಯದೇ. ಪರ ಧರ್ಮವನ್ನೂ ಪರ ವಿಚಾರಗಳನ್ನೂ ಸ್ವೈರಣೆಯಿಂದ ನೋಡುವುದೇ ನಿಜವಾದ ಚಿನ್ನ ಎನ್ನುತ್ತಾನೆ ಪೂರ್ವಸೂರಿ. ಮತ್ತೊಂದು ಧರ್ಮ–ವಿಚಾರದ ಕುರಿತು ನಾವು ಸಹಿಷ್ಣುಗಳಾಗದೆ ಹೋದರೆ, ಕಸವರದಿಂದೇನು ಪ್ರಯೋಜನ? ಅದು ಕಸವಲ್ಲದೆ ಬೇರೇನೂ ಅಲ್ಲ ಎನ್ನುವುದು ಕವಿರಾಜ ಮಾರ್ಗಕಾರನ ಮಾತಿನ ತಿರುಳು. ಸ್ವೈರಣೆಯ ರೂಪದಲ್ಲಿ ಚಿನ್ನವನ್ನು ಕಾಣುವ ಈ ವಿವೇಕದ ಹಣತೆ ಕನ್ನಡ ಸಾಹಿತ್ಯ ಪರಂಪರೆಯುದ್ದಕ್ಕೂ ಬೆಳಗುತ್ತಲೇ ಇದೆ. ಆ ಬೆಳಕಿನ ಹೊಯ್ದಾಟ ತಕ್ಕಮಟ್ಟಿಗೆ ಸಮಾಜದಲ್ಲೂ ಕಾಣಿಸುತ್ತದೆ.

ನಮ್ಮ ಹಿರಿಯರಿಗೆ ಅರಿವಿನ ರೂಪದಲ್ಲಿ ಬಾಳುವೆ ಕಂಡಿದೆ; ಬೆಳಕಿನ ರೂಪಕವಾಗಿ ಕಾಣಿಸಿದೆ. ‘ಬಾಳ್ವೆಯೇ ಬೆಳಕು’ ಎನ್ನುವುದು ಶಿವರಾಮ ಕಾರಂತರ ಮಾತು. ಈ ಅರಿವು–ಬೆಳಕಿನ ಸಿದ್ಧಿಯ ರೂಪದಲ್ಲಿ ಕಸ–ಕಸವರವನ್ನು ನೋಡಲಿಕ್ಕೆ ಸಾಧ್ಯವಿದೆ. ಬೆಂಕಿ ಬಸಿರಿನಲ್ಲಿ ಬೆಂದು, ಕಿಲುಬು ಕಸ ಕಳೆದು–ಕೊಂದು, ನಂತರವಷ್ಟೇ ಅಪರಂಜಿ ಸ್ಥಿತಿ. ಬದುಕಿನದೂ ಇದೇ ಗತಿ: ಅಗ್ನಿದಿವ್ಯಗಳನ್ನು ಹಾಯುತ್ತ ಹಾಯುತ್ತ ವಿಕಾರಗಳನ್ನೂ ಕಿಲ್ಬಿಶಗಳನ್ನೂ ಸುಟ್ಟುಕೊಂಡಂತೆಲ್ಲ ಅಪರಂಜಿತನದ ಅನಾವರಣ. ಕೊಂಡ ಹಾಯದ ಒಬ್ಬ ಮಹಾತ್ಮನನ್ನೂ ಈ ಜಗತ್ತು ಕಂಡಿಲ್ಲ. ಗಾಯಗೊಂಡವನಷ್ಟೇ ಮತ್ತೊಬ್ಬರ ನೋವಿಗೆ ಮಿಡಿಯಬಲ್ಲ, ಮುಲಾಮು ಹುಡುಕಬಲ್ಲ.

ಸ್ವೈರಣೆಯ ಕಸವರ ನಮ್ಮದಾದಾಗ, ಸಮಾಜದಲ್ಲಿ ಬಹುತ್ವವೂ ಜಾತ್ಯತೀತತೆಯೂ ಸಾಧ್ಯವಾಗುವುದು. ಆದರೆ, ಯಾವ ಕಾಲದಲ್ಲೂ ನಮ್ಮ ಬದುಕು ಅಪರಂಜಿಯಾಗಿರಲಿಲ್ಲ ಎನ್ನುವುದನ್ನು ಮರೆಯಬಾರದು. ಕಸವನ್ನು ಹೊರಚೆಲ್ಲಿ, ಕಸವರಕ್ಕೆ ಹಂಬಲಿಸುವ ಪ್ರಯತ್ನಗಳು ನಿರಂತರವಾಗಿ ನಡೆದರೂ, ಇತಿಹಾಸದ ಗುಂಡಿಯಲ್ಲಿ ದಟ್ಟವಾಗಿರುವುದು ಕಸವೇ. ವರ್ತಮಾನದಲ್ಲಂತೂ ಒಳಗೂ ಹೊರಗೂ ಕಸವನ್ನೇ ತುಂಬಿಕೊಂಡಿದ್ದೇವೆ; ಕಸವನ್ನು ಕಸವರವನ್ನಾಗಿಸಿಕೊಳ್ಳುವ ರಸವಿದ್ಯೆಯನ್ನು ದೂರವಿರಿಸಿದ್ದೇವೆ. ಇಂಥ ಸಂದರ್ಭದಲ್ಲಿ, ಕವಿರಾಜ ಮಾರ್ಗಕಾರ ಪ್ರತಿಪಾದಿಸಿದ ಕಸವರದ ಪರಿಕಲ್ಪನೆ ಕಸದ ಬಂಡಿಗಳಿಗಷ್ಟೇ ಅನ್ವಯಿಸುವಂತಿದೆ.

ಸುಪ್ರಭಾತದ ರೂಪದಲ್ಲಿ ಮನೆ ಮನೆಗಳ ಮುಂದೆ ಬಂದು ನಿಲ್ಲುವ ಕಸದ ಬಂಡಿಯನ್ನು ಗಮನಿಸಿ. ವಾಸ್ತವದಲ್ಲಿ ಸಾಕಾರಗೊಳ್ಳದ ಜಾತ್ಯತೀತತೆ, ಬಹುತ್ವ, ಸಮಾನತೆಯ ಆಶಯಗಳೆಲ್ಲ ಕಸದ ಗಾಡಿಯಲ್ಲಿ ಸಾಕಾರಗೊಂಡಿದೆ. ಎಲ್ಲರ ಮನೆಗಳ ಕಸವನ್ನೂ ಆತುಕೊಳ್ಳುವ ಕಸದ ಬಂಡಿ ನಿಜ ಜಾತ್ಯತೀತ. ಬಂಡಿಯಲ್ಲಿನ ಕಸಗಳ ಸ್ವರೂಪ ಸಮಾಜದ ವೈವಿಧ್ಯವನ್ನು ಕಾಣಿಸುವಂತಿದೆ. ಕಸಕಡ್ಡಿ ಮಡ್ಡಿ, ಹರಿದ ಚೆಡ್ಡಿ, ತರಗೆಲೆ, ಕುಟುಕು ಜೀವದ ಜಿರಲೆ, ಹಣ್ಣಿನ ಸಿಪ್ಪೆ, ಹಣ್ಣಾದ ಕಾಯಿಪಲ್ಲೆ, ಹಾಳೆ ಮಡಿಕೆಯೊಳಗೆ ಇಣುಕುತಿರುವ ಕಲೆ, ಉಳಿದ ಗುಕ್ಕು, ಯಾರದೋ ಬಿಕ್ಕು, ಉತ್ಕಟ ಕ್ಷಣಗಳ ಸುಖದ ಮುಲುಕಿನ ಶೇಷ, ಮೂಗು ಕುಯ್ಯಿಸಿಕೊಂಡು ನಿಸ್ತೇಜವಾದ ಹಾಲಿನ ಕವರು, ಉಸಿರುಳಿಸಿಕೊಳ್ಳಲು ಹಂಬಲಿಸುತಿರುವ ಹರಿದ ಪುಟದೊಳಗಿನ ಪದರುಗುಟ್ಟುವ ಅಕ್ಷರಗಳು, ಅವರ ಮನೆಯ ಮೂಳೆ, ಇವರ ಮನೆಯ ಪುಳಿಯೋಗರೆ, ಮೊಟ್ಟೆಯ ಕವಚ, ಮರದ ಗೆಲ್ಲು — ಕಸದ ಬಂಡಿಯೆನ್ನುವುದು ಬಹುತ್ವ ಪರಿಕಲ್ಪನೆಯ ಅಪೂರ್ವ ಕೊಲಾಜ್. ಓಣಿ–ಕೇರಿಗಳ ಜನರೆಲ್ಲ ಬಂಡಿಗೆ ಕಸ ಚೆಲ್ಲುತ್ತಾರೆ. ಆದರೆ, ಒಳಗಣ ಕಸವನ್ನು ಹೊರಚೆಲ್ಲುವುದು ಹೇಗೆ? ಅಂತರಂಗದೊಳಗಿನ ಕಸವನ್ನು ಮರೆಮಾಚುವಂತೆ ಮೈಮೇಲೆ ಚಿನ್ನವನ್ನು ಹೇರಿಕೊಂಡವರೂ ಇದ್ದಾರೆ. ನಮ್ಮ ಅರಿವುಗೇಡಿತನವನ್ನು ಅಣಕಿಸುವಂತೆ ಕಸದ ಬಂಡಿ ಮುಂದೆ ಸಾಗುತ್ತದೆ, ಮತ್ತೊಂದು ಮನೆಯೆದುರು ಜೋಳಿಗೆಯಂತೆ ಜ್ಯೋತಿಯಂತೆ ನಿಲ್ಲುತ್ತದೆ.

‘ಹೊಸ್ತಿಲಲ್ಲಿ ಹುಲ್ಲು ಹುಟ್ಟಿ, ಮನೆಯೊಳಗೆ ರಜ ತುಂಬಿ, ಮನೆಯೊಳಗೆ ಮನೆಯೊಡೆಯನಿದ್ದಾನೋ ಇಲ್ಲವೋ? ತನುವಿನೊಳಗೆ ಹುಸಿ ತುಂಬಿ, ಮನದೊಳಗೆ ವಿಷಯ ತುಂಬಿ, ಮನೆಯೊಳಗೆ ಮನೆಯೊಡೆಯನಿಲ್ಲಾ ಕೂಡಲಸಂಗಮದೇವಾ!’ ಎನ್ನುವುದು ಬಸವಣ್ಣನವರ ಜಿಜ್ಞಾಸೆ. ಮನೆಯೊಳಗೆ ಕಸ (ರಜ) ತುಂಬಿದ್ದಾಗ, ಅಂತಃಸಾಕ್ಷಿಯೆಂಬ– ಭಗವಂತನೆಂಬ– ಒಡೆಯ ಒಳಗಿರುವುದು ಹೇಗೆ ಸಾಧ್ಯ? ಒಳಗಿನಿಂದ ಹೊರದೂಡಿದ ದೇವನನ್ನು ಹೊರಗೆಲ್ಲೋ ಹುಡುಕುವುದರಲ್ಲಿ ವರ್ತಮಾನಕ್ಕೆ ಆಸಕ್ತಿ. ಒಡೆಯ ಸಿಕ್ಕಾನೆಯೆ?

■ **ಚಂಪಕಮಾಲಾ**

## ಮಾತೇ ಮುತ್ತು

- ಇತಿಹಾಸದುದ್ದಕ್ಕೂ ಸತ್ಯ ಪ್ರೇಮದ ದಾರಿ ಯಾವತ್ತಿಗೂ ಗೆದ್ದಿದೆ.
  —ಗಾಂಧೀಜಿ
- ಮನುಷ್ಯನನ್ನು ಒಳ್ಳೆಯವನ್ನಾಗಿ ಮಾಡುವುದೇ ನಿಜವಾದ ಧರ್ಮ.
  —ನಾರಾಯಣ ಗುರು
- ಮಣ್ಣು ಬಿಟ್ಟು ಮಡಿಕೆಯಿಲ್ಲ, ತನ್ನ ಬಿಟ್ಟು ದೇವರಿಲ್ಲ.
  —ಶಿಶುನಾಳ ಶರೀಫ
- ಒಂದು ಉದ್ಯಾನ ಹಾಗೂ ಗ್ರಂಥಾಲಯವನ್ನು ಒಳಗೊಂಡಿದ್ದರೆ ಅಗತ್ಯವಿರುವ ಎಲ್ಲವನ್ನೂ ಒಳಗೊಂಡಂತೆ.
  —ಸಿಸಿರೋ
- ಒಳ್ಳೆಯದನ್ನು ಮಾಡಿದರೆ ಸಾಲದು, ಅದನ್ನು ಒಳ್ಳೆಯ ರೀತಿಯಿಂದ ಮಾಡಬೇಕು.
  —ಚಾಣಕ್ಯ
- ಕಷ್ಟಪಟ್ಟು ದುಡಿಯಬೇಕೆನ್ನುವುದು ಜೀವನದ ಧ್ಯೇಯವಾದರೆ, ಅದೃಷ್ಟ ಎನ್ನುವುದು ಮನೆ ಬಾಗಿಲಿಗೆ ಬರಲಿದೆ.
  —ಗೋಲ್ಡ್ ಸ್ಮಿತ್
- ಬುದ್ಧಿ–ಭಾವಗಳ ವಿದ್ಯುದಾಲಿಂಗನವೇ ಪ್ರತಿಭೆ.
  — ಕುವೆಂಪು
- ಅಕ್ಕರೆಯಿಲ್ಲದ ಉಪ್ಪರಿಗೆ ತಿಪ್ಪೆಗಿಂತ ಕಡೆ.
  —ಗಾದೆ